**ಸಿ.ಸಿ. ನಂ.775/2023**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ

ನ್ಯಾಯಾಲಯ,   ಹೊಸನಗರ .

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ | ಪಿ.ಡಬ್ಲ್ಯೂ- 3 |
| ತಂದೆಯ ಹೆಸರು | ಃ | ಆನಂದ | ಸಿ.ಡಬ್ಲ್ಯೂ- 3 |
| ವಯಸ್ಸು | ಃ | 42 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಃ | ಕೂಲಿ ಕೆಲಸ | ದಿಃ 10/07/2026 |
| ವಾಸ | ಃ | ಬೆನವಳ್ಳಿ. | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.- 1 ಮತ್ತು 2 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಆರೋಪಿತರು ಮತ್ತು ಚಾಸಾ-1 ಮತ್ತು 2 ರವರ ಮಧ್ಯೆ ಆದ ಗಲಾಟೆಯನ್ನು ನಾನು ನೋಡಿರುವುದಿಲ್ಲ. ಘಟನೆ ಕುರಿತು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ 1 ಮತ್ತು 2 ನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಬೇಕೆಂದು ಮಾನ್ಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು. )

ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದ.

ದಿನಾಂಕ 29-06-2023 ರಂದು ನಾನು ಪೋಲೀಸರ ಮುಂದೆ ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ.-6

ಎಂದು ಗುರುತಿಸಲಾಯಿತು.ಆರೋಪಿತರು ಮತ್ತು ಚಾಸಾ-1 ಮತ್ತು 2 ಒಂದೇ ಕುಟುಂಬದವರಾಗಿದ್ದು ನಾನು ಅದೇ ಊರಿನವನಾಗಿದ್ದರಿಂದ ಘಟನೆ ಬಗ್ಗೆ ಮಾಹಿತಿ ಇದ್ದು ಈ ಸಂಬಂಧ ಪೋಲಿಸರ ಮುಂದೆ ನಿ.ಪಿ.-6 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ-** ಆರೋಪಿತರ ಪರ ಶ್ರೀ ಡಿ.ಎನ್.ಹೆಚ್. ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.